**ANDHOLANA**

Date: Feb 04, 2016 Page: 10

Edition: Mysore Language: Kannada

# ಸಂಸ್ಥೆಗಳಿಗೆ ಸಮಾಜಮುಖಿ ಚಿಂತನೆಯಿರಲಿ

## ಉದ್ಯಮಶೀಲತೆ ಕುರಿತ ಸ್ಟಾರ್ಟ್‌ಅಪ್ ಚರ್ಚಾ ಕಾರ್ಯಕ್ರಮದಲ್ಲಿ ಅರ್ಜುನ್ ರಂಗ

ಮೈಸೂರು,ಫೆ.೩- ನೂತನ ಕಂಪನಿಗಳನ್ನು ಆರಂಭಿಸುವವರಲ್ಲಿ ಲಾಭ ಗಳಿಸುವುದೊಂದೇ ಮುಖ್ಯವಾಗಬಾರದು. ಪಾರದರ್ಶಕತೆ, ಸಮಾಜಮುಖಿ ಚಿಂತನೆ, ಮಾನವೀಯತೆ ಗುಣಗಳನ್ನು ಪ್ರಧಾನ ಅಂಶವಾಗಿಸಿಕೊಳ್ಳಬೇಕು ಎಂದು ಎನ್.ಆರ್.ಗ್ರೂಪ್ ವ್ಯವಸ್ಥಾಪಕ ಪಾಲುದಾರ ಅರ್ಜುನ್ ಎಂ.ರಂಗ ತಿಳಿಸಿದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಉದ್ಯಮಶೀಲತೆ ಕುರಿತ ಸ್ಟಾರ್ಟ್‌ಅಪ್ ಚರ್ಚಾ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನೂತನ ಕಂಪನಿ ಆರಂಭಿಸುವವರು ದೊಡ್ಡ ಕಂಪನಿಯಲ್ಲಿ ೨ ವರ್ಷ ಕಡ್ಡಾಯವಾಗಿ ಅನುಭವ ಪಡೆದುಕೊಳ್ಳಬೇಕು. ಲಾಭವನ್ನು ಮಾತ್ರ ಮುಖ್ಯವಾಗಿಸಿಕೊಳ್ಳದೇ ತತ್ವಗಳ ಮೂಲಕ ಕಂಪನಿ ಆರಂಭಿಸಲು ಯತ್ನಿಸಬೇಕು. ಕಂಪನಿಗಳ ಆಗುಹೋಗುಗಳ ಬಗ್ಗೆ ತಿಳಿದುಕೊಂಡಾಗ ಮಾತ್ರ ಹೊಸ ಕಂಪನಿ ತೆರೆಯಲು ಸಾಧ್ಯ. ಈಗೀಗ ಉದ್ದೇಶವಿಲ್ಲದೆ, ಕಂಪನಿಗಳನ್ನು ಪ್ರಾರಂಭಿಸಲಾಗುತ್ತಿದೆ. ಇದಾಗಬಾರದು ಎಂದ ಅವರು ಶ್ರದ್ಧಾಪೂರ್ವಕವಾಗಿ ಕಂಪನಿ ಆರಂಭಿಸಿದರೆ ಯಶಸ್ವಿಯಾಗಬಹುದು ಎಂದು ಹೇಳಿದರು.

ಅನಂತರ ಉದ್ಯಮಶೀಲತೆ ಕುರಿತ ಸ್ಟಾರ್ಟ್‌ಅಪ್ ಚರ್ಚೆ ನಡೆಯಿತು. ಚರ್ಚೆಯಲ್ಲಿ ಎಸ್‌ಡಿಎಂಐಎಂಡಿ ಸಿಇಒ ಡಾ.ಹೆಚ್.ಎಸ್.ರಾಘವೇಂದ್ರ, ಅಧ್ಯಾಪಕರಾದ ಪ್ರೊ.ರಾಜೇಂದ್ರ ಕೊದಲ್ಬಾಗಿ, ಸುಧೀರ್ ಸೋಸಲೆ ಭಾಗವಹಿಸಿದ್ದರು.

ಎಸ್‌ಡಿಎಂಐಎಂಡಿ ನಿರ್ದೇಶಕ ಪರಶುರಾಮ್, ಉಪ ನಿರ್ದೇಶಕಿ ಡಾ.ಗಾಯತ್ರಿ, ಕಾರ್ಯಕ್ರಮ ಸಂಯೋಜಕ ಡಾ.ಎಂ.ಆರ್.ಸುರೇಶ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಎಸ್‌ಡಿಎಂಐಎಂಡಿ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಸ್ಟಾರ್ಟ್‌ಅಪ್ ಚರ್ಚೆಯಲ್ಲಿ ಎನ್.ಆರ್.ಗ್ರೂಪ್ ವ್ಯವಸ್ಥಾಪಕ ಪಾಲುದಾರ ಅರ್ಜುನ್ ಎಂ.ರಂಗ ಮಾತನಾಡುತ್ತಿರುವುದು.

> ನಮ್ಮ ತಾತನವರ ಕಾಲದಲ್ಲಿ ಆರಂಭವಾದ ಅಗರಬತ್ತಿ ಕಂಪನಿ ಪಾರದರ್ಶಕತೆ, ತೆರಿಗೆ, ಹಣಕಾಸಿನ ವಿಚಾರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಿದ್ದರಿಂದ ಬೆಳೆಯಲು ಸಾಧ್ಯವಾಯಿತು. ಈ ತತ್ವಗಳನ್ನೇ ಹೊಸ ಕಂಪನಿಗಳನ್ನು ಪ್ರಾರಂಭಿಸುವವರು ಅಳವಡಿಸಿಕೊಳ್ಳಬೇಕು.
> -ಅರ್ಜುನ್ ರಂಗ